## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಮಾನ್ಯ ಸದಸ್ಯರ ಹೆಸರು:** | **ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರು)** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | **377 (308)** |
| **ಉತ್ತರಿಸಬೇಕಾದ ದಿನಾಂಕ:** | **23.09.2020** |
| **ಉತ್ತರಿಸುವ ಸಚಿವರು:** | **ವಸತಿ ಸಚಿವರು** |

| ಕ್ರ. ಸ | ಪ್ರಶ್ನೆ | ಉತ್ತರ |
|---|---|---|
| (ಅ) | ಕೊಳಚೆ ಪ್ರದೇಶಗಳ ಸುಧಾರಣೆಗಾಗಿ ಸರ್ಕಾರದ ಯೋಜನಾ ಸೌಲಭ್ಯಗಳೇನು; ಕಳೆದ ಮೂರು ವರ್ಷಗಳ ಆರ್ಥಿಕ ವರ್ಷದಲ್ಲಿ ಈ ಕುರಿತಾಗಿ ಸಾಧಿಸಿದ ಗುರಿ ಮತ್ತು ಸಾಧನೆಗಳೇನು;(ವಿವರ ಒದಗಿಸುವುದು) | ಕೊಳಚೆ ಪ್ರದೇಶಗಳ ಸುಧಾರಣೆಗಾಗಿ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಒಳಚರಂಡಿ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.<br>ಕಳೆದ ಮೂರು ವರ್ಷಗಳಲ್ಲಿ ನಿಗಧಿಪಡಿಸಿರುವ ಗುರಿ ಮತ್ತು ಸಾಧನೆಗಲು ಕೆಳಕಂಡಂತಿದೆ.<br>[ರೂ.ಲಕ್ಷಗಳಲ್ಲಿ] |

| ಯೋಜನೆ | ವರ್ಷ | ಆರಂಭಿಕ ಶಿಲ್ಕು | ಆಯವ್ಯಯ ದಲ್ಲಿ ನಿಗಧಿ ಪಡಿಸಿ, ಬಿಡುಗಡೆ ಮಾಡಲಾದ ಅನುದಾನ | ನಿಗಧಿ ಪಡಿಸಿದ ಗುರಿ | ಒಟ್ಟು ವೆಚ್ಚ (ಸಾಧನೆ) (ರೂ. ಲಕ್ಷಗಳು ) |
|---|---|---|---|---|---|
| ಕೊಳಚೆ ಸುಧಾರಣೆ | 2017-18 | 5893.55 | 14250.00 | 20143.55 | 13012.16 |
| ಕೊಳಚೆ ಸುಧಾರಣೆ | 2018-19 | 7131.39 | 10830.00 | 17661.39 | 14364.93 |
| ಕೊಳಚೆ ಸುಧಾರಣೆ | 2019-20 | 3596.46 | 2831.64 | 6428.10 | 5697.50 |

| ಕ್ರ. ಸ | ಪ್ರಶ್ನೆ | ಉತ್ತರ |
|---|---|---|
| (ಆ) | ಕೊಳಚೆ ಪ್ರದೇಶಗಳಿಗೆ ಮೂಲ ಸೌಲಭ್ಯಗಳು ಮತ್ತು ವಸತಿ ಸೌಲಭ್ಯವನ್ನು ಒದಗಿಸಿಕೊಡುವ ದಿಶೆಯಲ್ಲಿ ಕೇಂದ್ರ ಸರ್ಕಾರದ ಪುರಷೃತ ಯೋಜನೆಗಳ ಮತ್ತು ಕೇಂದ್ರದಿಂದ ಪಡೆದ ಅನುದಾನ ಮೊತ್ತವೆಷ್ಟು; | ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ-ಸರ್ವರಿಗೂ ಸೂರು ಯೋಜನೆಯಡಿ ಕೊಳಗೇರಿ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳೊಂದಿಗೆ ವಸತಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮಂಜೂರಾಗಿರುವ ಮನೆಗಳು ಹಾಗೂ ಅನುಧಾನದ ವಿವರಗಳು ಕೆಳಕಂಡಂತಿದೆ. |

| ಯೋಜನೆ | ಮಂಜೂರಾದ ಮನೆಗಳ ಸಂಖ್ಯೆ | ಅಂದಾಜು ಮೊತ್ತ (ಕೋಟಿಗಳಲ್ಲಿ) | ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅನುದಾನ (ರೂ.ಕೋಟಿಗಳಲ್ಲಿ) | ಷರಾ |
|---|---|---|---|---|
| ಪ್ರಧಾನ ಮಂತ್ರಿ ಆವಾಸ್ ಯೋಜನೆ | 83,119 | 4459.70 | 494.11 | ಕಾಮಗಾರಿ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ |
| **ಒಟ್ಟು** | **83,119** | **4459.70** | **494.11** | |

| | | |
|---|---|---|
| (ಇ) | ಕಲಬುರಗಿ, ಬೀದರ್, ಯಾದಗಿರಿ, ಕೊಪ್ಪಳ, ವಿಜಯಪುರ, ಬಾಗಲಕೋಟೆ, ಬಳ್ಳಾರಿ ಜಿಲ್ಲೆಗಳ ಪ್ರದೇಶದಲ್ಲಿನ ಕೊಳಚೆ ಪ್ರದೇಶಗಳ ಸಮಗ್ರ ಸುಧಾರಣೆಗಾಗಿ ಮತ್ತು ಕೊಳಚೆ ನಿವಾಸಿಗಳಿಗೆ ಹಕ್ಕು ಪತ್ರಗಳು, ಮನೆ ನಿರ್ಮಾಣ ಒದಗಿಸಿಕೊಡುವಲ್ಲಿ ಸರ್ಕಾರದ ನಿಲುವುಗಳೇನು? | ಕೊಳಚೆ ಪ್ರದೇಶಗಳ ಸಮಗ್ರ ಸುಧಾರಣೆಗಾಗಿ ಕೊಳಚೆ ಸುಧಾರಣೆ ಯೋಜನೆಯಡಿ ಕೊಳಗೇರಿ ಪ್ರದೇಶಗಳಲ್ಲಿ ವಿವಿಧ ಮೂಲಭೂತ ಸೌಲಭ್ಯಗಳನ್ನು ಆಯ-ವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆ ತಯಾರಿಸಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ.<br><br>ರಾಜ್ಯ ಸರ್ಕಾರದ ವಾಜಪೇಯಿ ವಸತಿ ಯೋಜನೆ ಮತ್ತು ಡಾ|| ಅಂಬೇಡ್ಕರ್ ವಸತಿ ಯೋಜನೆಯನ್ನು ಸಮನ್ವಯಗೊಳಿಸಿ ಪ್ರಧಾನ ಮಂತ್ರಿ ಆವಾಸ್ ಯೋಜನೆ-ಸರ್ವರಿಗೂ ಸೂರು ಯೋಜನೆಯಡಿ ಮನೆಗಳ ನಿರ್ಮಾಣವನ್ನು ಕೈಗೊಳ್ಳಲಾಗುತ್ತದೆ.<br><br>ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆಯ ಭೂಮಾಲೀಕತ್ವದಲ್ಲಿರುವ ಕೊಳಚೆ ಪ್ರದೇಶದ ನಿವಾಸಿಗಳಿಗೆ ಹಕ್ಕುಪತ್ರವನ್ನು ನೀಡುವ ಬಗ್ಗೆ ಕ್ರಮವಹಿಸಲಾಗುತ್ತಿದೆ. |

**ವಇ 100 ಎಸ್‌ಬಿ ಎಂ 2020**

**(ವಿ. ಸೋಮಣ್ಣ)**
ವಸತಿ ಸಚಿವರು